ಪುರುಷೋತ್ತಮರಾಯರು ಮನೆಯ ಬಾಗಿಲಿಗೆ ಬಂದ ಸುದ್ದಿ ತಿಳಿದ ನಾರಾಯಣರಾಯರು ಓಡೋಡಿ ಬಂದರು. ಪುರುಷೋತ್ತಮರಾಯರು ಮೇಣೆಯಿಂದ ಇಳಿದು ನಾರಾಯಣರಾಯರನ್ನು ಬಿಗಿದಪ್ಪಿದರು. ಇಬ್ಬರೂ ಒಳಾಂಗಣಕ್ಕೆ ನಡೆದು ಬಂದರು.

ಮನೆತನದ ವೈಭವದ ಕಾಲದಲ್ಲಿ ಹಾಕುತ್ತಿದ್ದ ಕಾಶ್ಮೀರಿ ಕಂಬಳಿ, ಶಾಲು, ಗಾದಿ, ಮೃದು ದಿಂಬುಗಳು ಇಂದಿಗೂ ಇದ್ದವು. ಆದರೆ ಅವು ಅಲ್ಲಲ್ಲಿ ಹರಿದು ಹೋಗಿದ್ದವು. ದೂಳು ಮೆತ್ತಿಕೊಂಡಿತ್ತು. ಅಲ್ಲಲ್ಲಿ ಹಾಕಿದ ತೇಪೆಗಳು ಗತಕಾಲದ ವೈಭವ ಜ್ಞಾಪಿಸುತ್ತಿದ್ದವು.

ಇದನ್ನು ನೋಡುತ್ತಿದ್ದಂತೆ ಪುರುಷೋತ್ತಮರಾಯರ ಹೃದಯ ಝಲ್ಲೆಂದಿತು. ಅವರ ಮಾತು ಮೂಕವಾಯಿತು. ಅವರಿಗೆ ಅರಿವಿಲ್ಲದೆ ಅವರ ಕಣ್ಣಿನಿಂದ ಎರಡು ತೊಟ್ಟು ನೀರು ಹನಿಯಿತು.

ಕೆಲವು ಕ್ಷಣ ಇಬ್ಬರೂ ಮಾತನಾಡಲಿಲ್ಲ. ಪುರುಷೋತ್ತಮರಾಯರು ದಿಂಬಿಗೊರಗಿ ಕುಳಿತರು. ನಾರಾಯಣರಾಯರು ಸಂಕೋಚದಿಂದ ನಿಂತುಕೊಂಡಿದ್ದರು. ಪುರುಷೋತ್ತಮರಾಯರೇ ನಾರಾಯಣರಾಯರ ಕೈಹಿಡಿದು ಪಕ್ಕದಲ್ಲಿ ಕೂಡಿಸಿಕೊಂಡರು.

ಪುರುಷೋತ್ತಮರಾಯರ ಕಾಂತಿಯುಕ್ತ, ಸಾತ್ವಿಕ ಮುಖ, ಸದೃಢ ಮೈಕಟ್ಟು, ರುಬಾಬದಾರ ಮೀಸೆ ಕಿವಿಗಳಲ್ಲಿ ಮುತ್ತಿನ ಕುಡಕುಗಳು ತಲೆಗೆ ಸುತ್ತಿದ ಪೇಟ, ಮಿಂಚುವ ಕಣ್ಣುಗಳು ನಾರಾಯಣರಾಯರ ಮೌನ ಹೆಚ್ಚಿಸಿತು. ನಾರಾಯಣರಾಯರ ಬಾಡಿದ ಮುಖ, ನಿಸ್ತೇಜ ಕಣ್ಣುಗಳನ್ನು ನೋಡಿ ಕನಿಕರಗೊಂಡ ಪುರುಷೋತ್ತಮರಾಯರು 'ಒಣಗಿದ ಹೂವಿನಂತೆ ಭೂಮಿಗುರುಳುವ ಅನೇಕ ಮನೆಗಳನ್ನು ಎತ್ತಿ ಹಿಡಿದು ಅವರಲ್ಲಿ ಮತ್ತೆ ಬದುಕುವ ಉತ್ಸಾಹ ತುಂಬಿದ ತಾನು ಈ ದೊಡ್ಡ ಮನೆತನ ತಾನಾಗಿ ಬಾಡಿ ಹೋಗುವುದನ್ನು ನೋಡಲಾರೆ, ಈ ಮನೆತನ ಅಸ್ತಮಿಸಲು ಬಿಡಬಾರದು' ಎಂದು ನಿರ್ಧರಿಸಿದರು.

ಅನಂತರ ತಮ್ಮ ನಿಲುವಂಗಿಯ ಜೇಬಿನಲ್ಲಿ ಕೈಹಾಕಿ ರತ್ನಖಚಿತ ಕರಂಡಕದಲ್ಲಿ ತಂದ ಮೊಹರು ನಾರಾಯಣರಾಯರ ಕೈಯಲ್ಲಿಡುತ್ತ, 'ಇದು ನಿಮ್ಮದು, ದೇಶಪ್ರಭು ಮನೆತನದ ಆಸ್ತಿ, ಮನೆತನದ ಮಹಾಲಕ್ಷ್ಮಿ, ಪರಂಪರೆಯ ಪವಿತ್ರ ಸಂಕೇತ ನಿಮ್ಮ ಮನೆತನದ ಕೀರ್ತಿಗೆ ಕುಂದುಂಟಾಗಬಾರದೆಂದು ಮನೆತನದ ಮಾನ ಉಳಿಸಲೆಂದು ನೀವದನ್ನು ಪಣಕ್ಕಿಟ್ಟು ಬಂದಿದ್ದೀರಿ... ಧನ್ಯ' ಎಂದು ಪುರುಷೋತ್ತಮರಾಯರು ಅಭಿಮಾನದಿಂದ ನಾರಾಯಣರಾಯರನ್ನು ಅಪ್ಪಿಕೊಂಡರು. ನಾರಾಯಣರಾಯರ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಮಾತು ಮೂಕವಾಯಿತು. ಮನಸ್ಸು ಏನೇನೋ ಹೇಳಲು ಚಡಪಡಿಸುತ್ತಿತ್ತು. ನಾಲಿಗೆ ಮುಷ್ಕರ ಹೂಡಿತ್ತು. 'ರಾಯರೇ ಇದು ಹಿರಿಯರ ಪುಣ್ಯ ಸಂಗ್ರಹದ ಫಲ. ತಮ್ಮಂಥವರ ಕೃಪಾಶೀರ್ವಾದ' ಮುಂದೆ ಮಾತು ಹೊರಡಲಿಲ್ಲ.

ತಮ್ಮ ಮಗಳು ಬಾಗಿಲ ಮರೆಯಲ್ಲಿ ನಿಂತಿದ್ದಾಳೆಂದು ನೆರಳಿನಿಂದ ಗುರುತಿಸಿದ ನಾರಾಯಣರಾಯರು 'ಮಗಾ, ಇಲ್ಲಿ ಬಾ. ರಾಯರ ಆಶೀರ್ವಾದ ಪಡೆ' ಎಂದರು.

ತುಳಸಿ ಮೆಲ್ಲಗೆ ನಡೆದು ಬಂದು ಪುರುಷೋತ್ತಮರಾಯರ ಕಾಲು ಮುಟ್ಟಿ ನಮಸ್ಕರಿಸಿದಳು. ಅವರು ಕತ್ತೆತ್ತಿ ನೋಡಿದರು. ಮಿಂಚು ಸುಳಿದಂತಾಯಿತು. ಹಲವು ತಿಂಗಳಿನಿಂದ ಸೊಸೆಯನ್ನು ಹುಡುಕುತ್ತಿದ್ದ ರಾಯರಿಗೆ ಪರಿಹಾರ ಸಿಕ್ಕಂತಾಗಿತ್ತು. ಅವಳ ಮುಖಲಕ್ಷಣ, ಹಾವ ಭಾವ ಇವಳೇ ನಮ್ಮ ಮನೆತನಕ್ಕೆ ತಕ್ಕಸೊಸೆ ಎಂದು ಹೇಳಿದಂತಾಯಿತು. ಅವಳ ತಲೆಯ ಮೇಲೆ ವಾತ್ಸಲ್ಯದಿಂದ ಕೈಯಾಡಿಸಿದರು.

ತಮ್ಮ ಕೊರಳಲ್ಲಿದ್ದ ಚಿನ್ನದ ಸರ ತೆಗೆದು ತುಳಸಿಗೆ ತೊಡಿಸಿದರು. 'ನಾರಾಯಣರಾವ್ ನಿಮ್ಮ ಪೂರ್ವಜನ್ಮದ ಪುಣ್ಯ ಚೆನ್ನಾಗಿದೆ. ಈ ಪುಣ್ಯಫಲ ಬೆಳೆಯಬೇಕು. ನಮ್ಮ ಮನೆತನಕ್ಕೆ ಈ ಪುಣ್ಯಫಲ ಸೇರಬೇಕೆಂಬ ಬಯಕೆ. ನಮ್ಮ ಮಗ ವಿಷ್ಣುನ ಕೈಹಿಡಿದು ನಮ್ಮ ಮನೆಗೆ ಬರಲಿ. ನಾನು ಇವಳನ್ನು